**ಓ.ಎಸ್. ನಂ. 312/2012 ಡಿ.ಡಬ್ಲೂ-1 ಹೆಸರು - ಮನ್ನೇಗೌಡ**

**ಸಾಕ್ಷಿಯನ್ನು ದಿನಾಂಕಃ 05/01/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ.ಎಲ್.ಬಿ. ವಾದಿ ಪರ ವಕೀಲರಿಂದಃ-**

ವಾದ ಪತ್ರದ ಸಂಗತಿ ಮತ್ತು ದಾವಾ ಸ್ವತ್ತಿನ ಚೆಕ್ಕುಬಂಧಿಯನ್ನು ಓದಿಸಿ ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತಿನ ಚೆಕ್ಕುಬಂಧಿಯೊಳಗಡೆ ಯಾವುದೇ ಮನೆಗಳು ಇಲ್ಲ. ಸಾಕ್ಷಿ ಮುಂದುವರೆದು ಚೆಕ್ಕುಬಂಧಿ ತಪ್ಪು ಇದೆ ಎಂದು ನುಡಿಯುತ್ತಾರೆ. ದಾವ ಸ್ವತ್ತು ಚೆಕ್ಕುಬಂಧಿಯೊಳಗಿನ ವಿಸ್ತೀರ್ಣ ಅನ್ಯಕ್ರಾಂತ ಆಗಿಲ್ಲ. ನಾನು ಸರ್ವೆ ನಂಬರ್ 289/1ಎ ನಲ್ಲಿ ಮನೆ ಕಟ್ಟಿದ್ದೇನೆ. ನಾನು ಮನೆ ಕಟ್ಟಿರುವ ಜಾಗ ದಾವಾ ಸ್ವತ್ತಿನ ಚೆಕ್ಕುಬಂಧಿಯೊಳಗಡೆ ಬರುವುದಿಲ್ಲ. ನಾನು ಮನೆ ಕಟ್ಟಿರುವ ಜಾಗವನ್ನು ಅನ್ಯಕ್ರಾಂತ ಮಾಡಿಸಿಲ್ಲ. ಮುಡುಗುಂಡಶೆಟ್ಟಿ ಮತ್ತು ಅವರ ಮಕ್ಕಳನ್ನು ನಾನು ನೋಡಿಲ್ಲ. ಸದರಿ ಮುಡುಗುಂಡಶೆಟ್ಟಿ ಯವರಿಗೆ ಕುಯ್ಯ ಎನ್ನುವ ಮಗನಿದ್ದು ಅವರು ಪೇಪರ್ ಮಿಲ್ ಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕುಯ್ಯ ಎನ್ನುವವರಿಗೆ 2-3 ಜನ ಸಹೋದರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಕುಯ್ಯ ಎನ್ನುವವರ ಪತ್ನಿ ಸುಮತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಸುಮತಿ ತನ್ನ ಭಾವನ ವಿರುದ್ಧ ವಿಭಾಗಕ್ಕೆ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ತನ್ನ ಮಾವ ಮುಡುಗುಂಡಶೆಟ್ಟಿ ಸರ್ವೆ ನಂಬರ್ 289 ರಲ್ಲಿ ಖರೀದಿಸಿದ್ದ ಜಮೀನನ್ನು ಕೂಡ ಸೇರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಡಿಕ್ರಿಯಾದ ನಂತರ ಅಳತೆಗೆ ನ್ಯಾಯಾಲಯದ ನಿಯೋಗಿ ಬಂದಾಗ ನಾನು ಸ್ಥಳದಲ್ಲಿ ಹಾಜರಿದ್ದೆ ಎಂದರೆ ಸಾಕ್ಷಿಯು ಅಳತೆಗೆ ಬಂದಾಗ ನಾನು ಇದ್ದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ನಿಯೋಗಿ ತಮ್ಮ ವರದಿಯಲ್ಲಿ ಮುಡುಗುಂಡಶೆಟ್ಟಿ ಯವರ ಕ್ರಯ ಪತ್ರದಲ್ಲಿನ ಆಸ್ತಿಯ ವಿವರಕ್ಕೂ ಮತ್ತು ಸ್ಥಳದಲ್ಲಿನ ಆಸ್ತಿಗೂ ತಾಳೆ ಆಗುತ್ತಿಲ್ಲ ಎಂದು ನಮೂದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ನಿಯೋಗಿ ತಮ್ಮ ವರದಿಯಲ್ಲಿ ಕ್ರಯ ಪತ್ರದಲ್ಲಿನ ಸರ್ವೆ ನಂಬರ್ ನ ಪೋಡು ಮತ್ತು ಸ್ಥಳದಲ್ಲಿನ ಜಮೀನಿನ ಪೋಡಿಗು ವ್ಯತ್ಯಾಸ ವಿದೆ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ನಿಯೋಗಿ ವರದಿ ನೀಡಿದ ನಂತರ ಸುಮತಿ ಸದರಿ ವ್ಯತ್ಯಾಸವನ್ನು ಸರಿ ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಈ ಮೇಲಿನ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರು ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 289 ನನ್ನ ತಾಯಿಯ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸರಿ. ಸರ್ವೆ ನಂಬರ್ 289 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 289/1 ರ ವಿಸ್ತೀರ್ಣ 1 ಎಕರೆ 5 ಗುಂಟೆ ( 9 ಗುಂಟೆ ಖರಾಬನ್ನು ಸೇರಿ) ನನ್ನ ತಾಯಿಯ ಹೆಸರಿನಲ್ಲಿ ಇತ್ತು. ಸದರಿ ಸರ್ವೆ ನಂಬರ್ 289 ರಲ್ಲಿ ನನ್ನ ತಂದೆಯ ಹೆಸರಿಗೆ 1 ಎಕರೆ 7 ಗುಂಟೆ ಜಮೀನು ಇತ್ತು. ಸದರಿ ಜಮೀನಿನ ಪೋಡ್ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನನ್ನ ತಂದೆ ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ. ನನ್ನ ತಂದೆಯ 1 ಎಕರೆ 7 ಗುಂಟೆ ಜಮೀನಿನಲ್ಲಿ ಬೇರೆ ಯವರು ಇದ್ದಾರೆ. ಬೇರೆಯವರು ಕ್ರಯದ ಆಧಾರದ ಮೇಲೆ ಇರಬಹುದು.

ನನ್ನ ತಾಯಿ ಅವರ 1 ಎಕರೆ 5 ಗುಂಟೆ ಜಮೀನನ್ನು ಸುಮಾರು ಜನರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸದರಿ ಜಮೀನಿನ ಖಾತೆ ನನ್ನ ತಾಯಿಯ ಹೆಸರಿನಲ್ಲಿ ಇದೆ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1**ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**